**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3900/ 2023**

**ಚಾಸಾ ಃ- 03 / ಪ್ರಾಸಾ ಃ- 05**

| | |
|---|---|
| ಹೆಸರು | ಸತೀಶ್ |
| ತಂದೆ ಹೆಸರು | ನಿಂಗಯ್ಯ |
| ವಯಸ್ಸು | 17 |
| ಉದ್ಯೋಗ | ವಿದ್ಯಾರ್ಥಿ |
| ವಿಳಾಸ | ಉಡುವೆಗೆರೆ |

**ದಿನಾಂಕಃ 18.10.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ-

ಚಾಸಾ 1 ರವರು ನನ್ನ ಅಜ್ಜಿ. ಚಾಸಾ 2 ರವರು ನನ್ನ ತಾಯಿ. ಚಾಸಾ 4 ರವರು ನನ್ನ ತಮ್ಮ. ಆರೋಪಿಯು ನನ್ನ ದೊಡ್ಡಪ್ಪ ದಿನಾಂಕ 06.06.2023 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಾನು, ಚಾಸ 1 ಮತ್ತು 4ರವರು ಆಡನ್ನು ನಮ್ಮ ಜಮೀನಿನಲ್ಲಿ ಮೇಯಿಸುತ್ತ ಕೂತಿದ್ದೆವು, ಆಗ ಆರೋಪಿಯು ಬಂದು ಯಾರು ಆಡನ್ನು ಮೇಯಿಸುವುದು ಎಂದು ಕೇಳಿದರು. ಆರೋಪಿಯು ನಿಮ್ಮದು ಇಲ್ಲಿ ಏನೂ ಇರುವುದಿಲ್ಲ ಮೇಯಿಸಲು ಆಚೆ ನಡೆಯಿರಿ ಎಂದು ಹೇಳಿದರು. ಆರೋಪಿಯು ಚಾಸಾ 1 ರವರಿಗೆ ದೊಣ್ಣೆಯಿಂದ ತಲೆ ಮತ್ತು ಮೈಕೈಗೆ ಹಲ್ಲೆ ಮಾಡಿರುತ್ತಾರೆ. ನಂತರ ನಾವು ಏಕೆ ಹಲ್ಲೆ ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ನನ್ನ ತಾಯಿಯವರಾದ ಚಾಸಾ 2ರವರಿಗೂ ಹಲ್ಲೆ ಮಾಡಿರುತ್ತಾರೆ. ನಂತರ ನಾವು ಕಿರುಚಾಡುತ್ತಾ ರೋಡಿಗೆ ಬಂದಿರುತ್ತೇವೆ. ನಂತರ ಚಾಸಾ 1 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತೇವೆ. ನಂತರ ಚಾಸಾ 1ರವರು ದೂರನ್ನು ಕೊಟ್ಟಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ದೊಣ್ಣೆಯನ್ನು ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮ ನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಆರೋಪಿಯು ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ನೀವು ಇದ್ದರೆ ತಾನೆ ಆಸ್ತಿ ಕೇಳುವುದು ನಿಮ್ಮನ್ನು ಮುಗಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಪಾಟೀ ಸವಾಲು** ಃ- **ಶ್ರೀ. ಎಂ ವಿ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

ಗಲಾಟೆ ಆಯಿತು ಎಂದು ಹೇಳಿದ್ದು ಸದರಿ ದಿನದಂದು ನೀನು ಶಾಲೆಗೆ ಹೋಗಿರುತ್ತೀರಿ ಎಂದರೆ ಸಾಕ್ಷಿ ಆ ದಿನ ರಜೆ ಇತ್ತು ಎಂದು ನುಡಿಯುತ್ತಾರೆ. ಸದರಿ ದಿನ ಭಾನುವಾರವಾಗಿತ್ತು ಎಂದು ನುಡಿಯುತ್ತಾರೆ. ನೀನು ಶಾಲೆಗೆ ಎಷುಟ ಗಂಟೆಗೆ ಹೋಗಿ ವಾಪಸ್ಸು ಬರುತ್ತೀರಿ ಎಂದರೆ ಸಾಕ್ಷಿ ಬೆಳಿಗ್ಗೆ 9.30 ಗಂಟೆಗೆ ಹೋಗಿ ಸಂಜೆ 4.00 ಗಂಟೆಗೆ ವಾಪಸ್ಸು ಬರುತ್ತೇನೆ ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಹೇಳಿದ್ದು ಸದರಿ ಸಮಯದಲ್ಲಿ ನೀವು ಎಲ್ಲಿ ವಿದ್ಯಾಭ್ಯಾಸ ಮಾಡತ್ತಿದ್ದುದ್ದು ಎಂದರೆ ಸಾಕ್ಷಿ ಅಂಕನಹಳ್ಳಿ ಮಠದಲ್ಲಿ ಎಂದು ನುಡಿಯುತ್ತಾರೆ. ಸದರಿ ಅಂಕನಹಳ್ಳಿ ಮಠವು ಮಾಗಡಿಯಿಂದ ಸುಮಾರು 18 ರಿಂದ 20 ಕಿ.ಮೀ. ಆಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಶಾಲೆಯು ವಸತಿ ಶಾಲೆಯಾಗಿದ್ದು ಅಲ್ಲೆ ಇದ್ದು ವಿದ್ಯಾಭ್ಯಾಸ ಮಾಡಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಊರಿಗೆ ಬರಲು ಸದರಿ ಶಾಲೆಯಿಂದ ಅನುಮತಿ ಪಡೆದು ಬಂದಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅನುಮತಿ ಪತ್ರವನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇರುವುದಿಲ್ಲವಾ ಎಂದರೆ ಸಾಕ್ಷಿ ಮಠದಲ್ಲಿ ಇದೆಯೋ ಅಥವಾ ಇಲ್ಲವೋ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 06.06.2023 ಮಂಗಳವಾರ ಎಂದರೆ ಸಾಕ್ಷಿ ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 06.06.2023 ಮಂಗಳವಾರ ಇದ್ದು ನೀವು ಮರೆತಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು

ನುಡಿಯುತ್ತಾರೆ. ಗಲಾಟೆ ನಡೆಯಿತು ಎಂದು ಹೇಳಿರುವ ದಿನ ಭಾನುವಾರ ಅಲ್ಲ ಎಂದರೆ ಸಾಕ್ಷಿ ವಾರ ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೂ ಮತ್ತು ಆರೋಪಿಗೂ ಜಮೀನಿನ ವಿಷಯದಲ್ಲಿ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವುದೇ ಗಲಾಟೆ ಆಗದಿದ್ದರೂ ಚಾಸಾ 1 ಮತ್ತು 2ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಹೇಳಿದ್ದು ಆ ಸಮಯದಲ್ಲಿ ಸುಮಾರು ಎಷ್ಟು ಜನರು ಇದ್ದರು ಎಂದರೆ ಸಾಕ್ಷಿ ಸುಮಾರು 10-15 ಜನ ಎಂದು ನುಡಿಯುತ್ತಾರೆ. ಸದರಿಯವರು ಯಾರು ಯಾರ ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಬರುವಷ್ಟರಲ್ಲಿ ಗಲಾಟೆ ಆಗಿತ್ತ ಅಥವಾ ನಿಮ್ಮ ಎದುರಿಗೆ ಗಲಾಟೆ ಆಯಿತ ಎಂದರೆ ಸಾಕ್ಷಿ ನನ್ನ ಎದುರಿನಲ್ಲೆ ಗಲಾಟೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ 1 ರವರಿಗೆ ಪ್ರಜ್ಞೆತಪ್ಪಿತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಷ್ಟು ದಿನಗಳ ನಂತರ ಪ್ರಜ್ಞೆ ಬಂದಿರುತ್ತದೆ ಎಂದರೆ ಸಾಕ್ಷಿ ಆಸ್ಪತ್ರಗೆ ಹೋದ ತಕ್ಷಣ ಎಂದು ನುಡಿಯುತ್ತಾರೆ. ನೀವು ಚಾಸಾ 1 ರವರ ಜೊತೆ ಆಸ್ಪತ್ರೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ 1 ರವರ ಬಟ್ಟೆ ರಕ್ತದ ಕಲೆ ಆಗಿತ್ತ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲಿಸರಿಗೆ ಸದರಿ ರಕ್ತದ ಕಲೆ ಆಗಿದ್ದ ಬಟ್ಟೆಯನ್ನು ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಇದೇ ಮೊದಲಭಾರಿಗೆ ಹೇಳುತ್ತಿದ್ದು ಮೊದಲು ಎಲ್ಲೂ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಹೇಳುವಂತೆ ಯಾವುದೇ ಗಲಾಟೆ ಆಗಿರುವುದಿಲ್ಲ ಆರೋಪಿಗೆ ತೊಂದರೆ ಕೊಡಲು ಚಾಸಾ 1 ಮತ್ತು 2ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 3900/ 2023**

**ಚಾಸಾ ಃ- 04 / ಪ್ರಾಸಾ ಃ- 06**

| | |
|---|---|
| ಹೆಸರು | ವಿಶಾಲ್ ಗೌಡ |
| ತಂದೆ ಹೆಸರು | ನಿಂಗಯ್ಯ |
| ವಯಸ್ಸು | 14 |
| ಉದ್ಯೋಗ | ವಿದ್ಯಾರ್ಥಿ |
| ವಿಳಾಸ | ಉಡುವೆಗೆರೆ |

**ದಿನಾಂಕಃ 18.10.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

1. ನ್ಯಾಯಾಲಯದ ಪ್ರಶ್ನೆಃಃ ಎಲ್ಲಿಗೆ ಬಂದಿರುತ್ತೀರಿ?
ಉತ್ತರಃ ಸಾಕ್ಷಿ ನ್ಯಾಯಾಲಯಕ್ಕೆ ಎಂದು ನುಡಿಯುತ್ತಾರೆ.

2. ನ್ಯಾಯಾಲಯದ ಪ್ರಶ್ನೆಃಃ ನ್ಯಾಯಾಲಯದಲ್ಲಿ ಇರುವವರು ಯಾರು ?
ಉತ್ತರಃ ಸಾಕ್ಷಿ ವಕೀಲರು ಎಂದು ನುಡಿಯುತ್ತಾರೆ.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಚಾಸಾ 1 ರವರು ನನ್ನ ಅಜ್ಜಿ. ಚಾಸಾ 2 ರವರು ನನ್ನ ತಾಯಿ. ಚಾಸಾ 3 ರವರು ನನ್ನ ಅಣ್ಣ. ಆರೋಪಿಯು ನನ್ನ ದೊಡ್ಡಪ್ಪ. ದಿನಾಂಕ 06.06.2023 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಾನು, ಚಾಸ 1 ಮತ್ತು 3 ರವರು ಆಡನ್ನು ನಮ್ಮ ಜಮೀನಿನಲ್ಲಿ ಮೇಯಿಸುತ್ತ ಇದ್ದೆವು, ಆಗ ಆರೋಪಿಯು ಬಂದು ಯಾರು ಆಡನ್ನು ಮೇಯಿಸುವುದು ಎಂದು ಕೇಳಿದರು. ನಾವು ಆರೋಪಿಗೆ ನಾವು ಮೇಯಿಸುತ್ತಿದ್ದೇವೆ ಎಂದು ಹೇಳಿದ್ದೆವು ಅಗ ಆರೋಪಿಯು ನೀವು ಇಲ್ಲಿ ಏಕೆ ಮೇಯಿಸುತ್ತಿದ್ದೀರಿ ಎಂದು ಕೇಳಿದರು ಆಗ ನಾವು ನಮ್ಮ ಭಾಗಕ್ಕೆ ಜಮೀನನ್ನು ಕೊಡಿ ಇಲ್ಲೆ ಮೇಯಿಸುತ್ತೇವೆ ಎಂದು ಹೇಳಿರುತ್ತೇವೆ. ಆಗ ಆರೋಪಿಯು ಆಡುಗಳನ್ನು ಹೊಡೆದುಕೊಂಡು ಹೋಗಿ ಎಂದು ಹೇಳಿದರು. ಆಗ ಚಾಸಾ 1ರವರು ನಮಗೆ ಭಾಗ ಕೊಡಿ

ಎಂದು ಕೇಳಿದರು, ಆಗ ಆರೋಪಿಯು ಭಾಗ ಏಕೆ ಕೊಡಬೇಕು ನೀವು ಇದ್ದರೆ ತಾನೆ ಭಾಗ ಕೇಳುವುದು ಎಂದು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿಯು ಚಾಸಾ 1 ರವರ ತಲೆಗೆ ಮತ್ತು ಮೈ ಕೈ ಗೆ ಹಲ್ಲೆ ಮಾಡುತ್ತಿದ್ದರು. ಆಗ ನನ್ನ ತಾಯಿ ಬಂದು ಆರೋಪಿಗೆ ಏಕೆ ಹಲ್ಲೆ ಮಾಡುತ್ತಿದ್ದೀರಿ ಎಂದು ಕೇಳಿದ್ದಕ್ಕೆ ಆರೋಪಿಯು ನನ್ನ ತಾಯಿಯ ತಲೆಗೆ ಮತ್ತು ಮೈಕೈಗೆ ಹಲ್ಲೆ ಮಾಡಿರುತ್ತಾರೆ. ನಂತರ ನಾವು ಏಕೆ ಹೊಡೆಯುತ್ತೀರಿ ಎಂದು ಕಿರುಚಾಡುತ್ತಿದ್ದಾಗ ನಮಗೂ ಕಲ್ಲಿನಿಂದ ಹೊಡೆಯಲು ಬಂದರು. ನಂತರ ನಾವು ನನ್ನ ತಂದೆಗೆ ಫೋನ್ ಮಾಡಿದೆವು. ನಂತರ ನನ್ನ ತಂದೆ ಮತ್ತು ಅವರ ಸನೇಹಿತರು ಬಂದರು. ನಂತರ ಚಾಸಾ 1 ಮತ್ತು 2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತೇವೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಸದರಿ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಗೆ ಮುದ್ದೆಮಾಲು 1 ಅನ್ನು ತೋರಿಸಲಾಗಿ ದೊಣ್ಣೆಯನ್ನು ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ನ್ಯಾಯಾಲಯದಲ್ಲಿಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮ ನವಿಯನ್ನು ಪುರಸ್ಕರಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**
**ವಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಆರೋಪಿಯು ಚಾಸಾ 1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ನೀವು ಇದ್ದರೆ ತಾನೆ ಆಸ್ತಿ ಕೇಳುವುದು ನಿಮ್ಮನ್ನು ಮುಗಿಸುತ್ತೇನೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ವಾಟೀ ಸವಾಲು ಃ- ಶ್ರೀ. ಎಂ ವಿ ಎಸ್** ವಕೀಲರಿಂದ **ಆರೋಪಿಗಳ** ಪರವಾಗಿ ಃ-

2023 ನೇ ಸಾಲಿನಲ್ಲಿ ನೀವು ಎಷ್ಟನೆ ತರಗತಿ ವಿದ್ಯಭ್ಯಾಸ ಮಾಡುತ್ತಿದ್ದಿರಿ ಎಂದರೆ ಸಾಕ್ಷಿ ನೇ 7 ತರಗತಿ ಎಂದು ನುಡಿಯುತ್ತಾರೆ.ನೀವು

ಎಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದುದ್ದು ಎಂದರೆ ಸಾಕ್ಷಿ ಅಂಕನಹಳ್ಳಿ ಮಠದಲ್ಲಿ ಎಂದು ನುಡಿಯುತ್ತಾರೆ. ಸದರಿ ಅಂಕನಹಳ್ಳಿ ಮಠವು ಮಾಗಡಿಯಿಂದ ಸುಮಾರು 18 ರಿಂದ 20 ಕಿ.ಮೀ. ಆಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಮಾಗಡಿಯಿಂದ ನಿಮ್ಮ ಊರಿಗೆ 3-4 ಕಿ.ಮೀ. ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀನು ಶಾಲೆಗೆ ಎಷ್ಟು ಗಂಟೆಗೆ ಹೋಗಿ ವಾಪಸ್ಸು ಬರುತ್ತೀರಿ ಎಂದರೆ ಸಾಕ್ಷಿ ಬೆಳಿಗ್ಗೆ 10.00 ಗಂಟೆಗೆ ಹೋಗಿ ಸಂಜೆ 4.00 ಗಂಟೆಗೆ ವಾಪಸ್ಸು ಬರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಶಾಲೆಯು ವಸತಿ ಶಾಲೆಯಾಗಿದ್ದು ಅಲ್ಲೆ ಇದ್ದು ವಿದ್ಯಾಭ್ಯಾಸ ಮಾಡಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಊರಿಗೆ ಬರಲು ಸದರಿ ಶಾಲೆಯಿಂದ ಅನುಮತಿ ಪಡೆದು ಬರಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ರಜ ದಿನದಲ್ಲಿ ಮಾತ್ರ ಊರಿಗೆ ಕಳುಹಿಸುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಹೇಳಿದ್ದು ಅದು ಯಾವ ವಾರ ಎಂದರೆ ಸಾಕ್ಷಿ ಮಂಗಳವಾರ ಎಂದು ನುಡಿಯುತ್ತಾರೆ. ಮಂಗಳವಾರ ಶಾಲೆ ಇದ್ದು ನಿಮ್ಮನುನ ಆಚೆ ಕಳುಹಿಸುವುದಿಲಲ ಎಂದರೆ ಸಾಕ್ಷಿ ಸದರಿ ದಿನದಂದು ರಜೆ ಇತ್ತು ಎಂದು ನುಡಿಯುತ್ತಾರೆ. ಸದರಿ ಮಂಗಳವಾರದಂದು ಯಾವುದೇ ರಜೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. 15-20 ದಿನ ರಜೆ ಇದ್ದರೆ ಮಾತ್ರ ಸದರಿ ಶಾಲೆಯಿಂದ ಊರಿಗೆ ಕಳುಹಿಸುತ್ತಾರೆ ಇಲ್ಲದಿದ್ದರೆ ಊರಿಗೆ ಕಳುಹಿಸುವುದಿಲ್ಲ ಎಂದರೆ ಸಾಕ್ಷಿ ಕೇಳಿದರೆ ಕಳುಹಿಸುತ್ತಾರೆ ಎಂದು ನುಡಿಯುತ್ತಾರೆ. ಅನುಮತಿ ಪತ್ರ ಇದೆಯೊ ಎಂದರೆ ಸಾಕ್ಷಿ ಮಠದಲ್ಲೆ ಇದೆ ಎಂದು ನುಡಿಯುತ್ತಾರೆ.

ನಿಮಗೂ ಮತ್ತು ಆರೋಪಿಗೂ ಜಮೀನಿನ ವಿಷಯದಲ್ಲಿ ಮಾತುಕತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ಹೇಳಿದ್ದು ಚಸಾ 1 ರವರು ಪ್ರಜ್ಞೆ ತಪ್ಪಿ ದ್ದರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಎಷ್ಟು ದಿನಗಳ ನಂತರ ಪ್ರಜ್ಞೆ ಬಂದಿರುತ್ತದೆ ಎಂದರೆ ಸಾಕ್ಷಿ ಆಸ್ಪತ್ರೆಯಲ್ಲಿ ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ಯಾರು ಯಾರು ಹೋಗಿರುತ್ತೀರಿ ಎಂದರೆ ಸಾಕ್ಷಿ

ಚಾಸಾ1, 2 ಮತ್ತು ನನ್ನ ತಂದೆ ಎಂದು ನುಡಿಯುತ್ತಾರೆ. ನೀವು ಆಸ್ಪತ್ರೆಗೆ ಹೋಗಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಹೇಳಿದ್ದು ಎಷ್ಟು ಜನ ಸೇರಿದ್ದರು ಎಂದರೆ ಸಾಕ್ಷಿ ಯಾರೋಬ್ಬರೂ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ1 ರವರ ಬಟ್ಟೆಯು ರಕ್ತದ ಕಲೆ ಆಗಿತ್ತ ಎಂದರೆ ಸಾಕ್ಷಿ ಹೌದದು ಎಂದು ನುಡಿಯುತ್ತಾರೆ. ಸದರಿ ಬಟ್ಟೆಯನ್ನು ಪೋಲಿಸರಿಗೆ ಕೊಟ್ಟಿರುತ್ತಾರಾ ಎಂದರೆ ಸಾಕ್ಷಿ ವೈದ್ಯಾಧಿಕಾರಿಗಳು ಡಸ್ಪಿನ್ ಹಾಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಮುದ್ದೆ ಮಾಲು 1 ಅನ್ನು ಪೋಲಿಸರಿಗೆ ಯಾರು ಕೊಟ್ಟಿದ್ದು ಎಂದರೆ ಸಾಕ್ಷಿ ನನ್ನ ತಂದೆ ಎಂದು ನುಡಿಯುತ್ತಾರೆ. ಮುದ್ದೆಮಾಲು 1 ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮುದ್ದೆಮಾಲು 1 ರಿದಲೇ ಹಲ್ಲೆ ಮಾಡಿರುತ್ತಾರೆ ಎಂದು ಏನಾದರೂ ಗುರುತು ಇಟ್ಟುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಚಾಸಾ 1 ರವರಿಗೆ ಊರುಗೋಲನ್ನು ಕೊಟ್ಟಿದ್ದು ಎಂದು ನುಡಿಯುತ್ತಾರೆ. ಯಾವುದೇ ಗಲಾಟೆ ಆಗದಿದ್ದರೂ ಚಾಸಾ 1 ಮತ್ತು 2ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ಆಯಿತು ಎಂದು ಇದೇ ಮೊದಲಭಾರಿಗೆ ಹೇಳುತ್ತಿದ್ದು ಮೊದಲು ಎಲ್ಲೂ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.**
**ಮಾಗಡಿ.**